ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನಾನು ಇಂಟರ್ ಮೀಡಿಯೇಟ್ ವರೆಗೆ ಕಲಿತಿದ್ದೇನೆ. ಚಿಂತಾಮಣಿ ಮಾಲೂರು ಕೋಲಾರದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡವನ್ನು ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಜನ್ಮ ದಿನಾಂಕ 28.03.1939. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನಿಮ್ಮ ವಯಸ್ಸು 80 ಮತ್ತು ಮತ್ತೊಂದು ಕಡೆ 87 ವರ್ಷ ಎಂದು ನಮೂದು ಇದೆ ಎಂದರೆ ಸಾಕ್ಷಿ ನಾನು ಆ ರೀತಿ ಹೇಳಿಲ್ಲ ನನ್ನ ವಯಸ್ಸು 87 ವರ್ಷ ವಯಸ್ಸಾಗಿದೆ.

ನಾನು ಆಗಮ ಪದ್ಧತಿಯಲ್ಲಿ ಯಾವುದೇ ಸರ್ಟೀಫಿಕೇಟ್ ಪಡೆದುಕೊಂಡಿಲ್ಲ ನನ್ನ ತಂದೆಯ ಕಡೆಯಿಂದ ಕಲಿತಿದ್ದೇನೆ. 1953ರವರೆಗೂ ನಾನು ಚಿಂತಾಮಣಿಯಲ್ಲಿ ವಾಸ ಮಾಡಿಕೊಂಡಿದ್ದೆನು. ಆ ಸಮಯದಲ್ಲಿ ನಾನು ಒಬ್ಬನೇ ವಾಸ ಮಾಡಿಕೊಂಡಿದ್ದೆನು. ನನ್ನ ಕುಟುಂಬ ವರ್ಗದವರು ಬಂಗಾರಪೇಟೆಯ ಮಾರಮುತ್ತನಹಳ್ಳಿಯಲ್ಲಿ ವಾಸ ಮಾಡಿಕೊಂಡಿದ್ದರು. ನನ್ನ ತಂದೆಯವರು ಮಾರಮುತ್ತನಹಳ್ಳಿಯಲ್ಲಿ ಇರುವ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ಅರ್ಚಕರ ವೃತ್ತಿ ಮಾಡಿಕೊಂಡಿದ್ದರು. ನನ್ನ ತಂದೆ ಅರ್ಚಕ ವೃತ್ತಿ ಮಾಡಿಕೊಂಡ ಇಸವಿ ನನಗೆ ಗೊತ್ತಿಲ್ಲ.

1974ರಲ್ಲಿ ನಾನು ಬಿಡದಿ ಗ್ರಾಮಕ್ಕೆ ಬಂದೆನು. ನಮ್ಮ ತಂದೆಯವರಿಗೆ 4 ಜನ ಮಕ್ಕಳು. ನಾನು 1974ರಲ್ಲಿ ಬಿಡದಿಗೆ ಬಂದೆ ಅದಕ್ಕೂ ಮೊದಲೇ ನನ್ನ ತಂದೆ ಬಂದಿರುತ್ತಾರೆ. ನಮ್ಮ ತಂದೆಯವರು ಬಿಡದಿಗೆ ಬಂದ ವರ್ಷ ನನಗೆ ನೆನಪಿಲ್ಲ. ನಮ್ಮ ತಾತನವರು ದೇವಸ್ಥಾನ ಪ್ರತಿಷ್ಠಾಪನೆ ಮಾಡಿದರು ನಂತರ

ನನ್ನ ತಂದೆಯವರು ಬಂದಿರುತ್ತಾರೆ. ನನ್ನ ತಾತನವರು ಪ್ರತಿಷ್ಠಾಪನೆ ಮಾಡಿರುವ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆಯವರು ನನಗೆ ಆ ಬಗ್ಗೆ ತಿಳಿಸಿರುತ್ತಾರೆ. ನನ್ನ ತಾತನವರು ಮೂಲವಾಗಿ ತಿರುಪತಿಯಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು, ಅವರನ್ನು ಕರೆದುಕೊಂಡು ಬಂದು ಪ್ರತಿಷ್ಠಾಪನೆ ಮಾಡಿರುತ್ತಾರೆ. ನಮ್ಮ ತಾತನವರು ಪ್ರತಿಷ್ಠಾಪನೆ ಮಾಡಿರುತ್ತಾರೆ, ನನ್ನ ತಂದೆ ಪೌರೊಹಿತ್ಯ ಮಾಡಿರುತ್ತಾರೆ.

ಪ್ರತಿಷ್ಠಾಪನೆ ಮಾಡಿರುವ ವಿಚಾರವಾಗಿ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ನಿಪಿ-8ರಲ್ಲಿ ನಾನು ಮತ್ತು ನನ್ನ ಅಣ್ಣನ ಬಾವಚಿತ್ರ ಇದೆ. ಕಲ್ಯಾಣೋತ್ಸವದಲ್ಲಿ ಫೋಟೋ ತೆಗೆಯಲಾಗಿದೆ. ನಿಪಿ-9ನ್ನು ಸಾಕ್ಷಿಗೆ ತೋರಿಸಿದಾಗ ಅದರಲ್ಲಿ ಕಾಣುವ ವ್ಯಕ್ತಿಗಳು ಯಾರು ಎಂದು ಕೇಳಿದಾಗ ಸಾಕ್ಷಿಯು ನಿಮ್ಮ ತಂದೆ ತಾಯಿ ಎಂದು ವಕೀಲರಿಗೆ ಹೇಳಿರುತ್ತಾರೆ. ಸದರಿ ವೆಂಕಟಮ್ಮ ಮತ್ತು ವೆಂಕಟಸ್ವಾಮಿರವರು ಕಲ್ಯಾಣೋತ್ಸವ ಮಾಡಬೇಕು ಎಂದು ಕೇಳಿದ್ದರಿಂದ ಮಾಡಿಸಿದಾಗ ತೆಗೆದಿರುವ ಫೋಟೋ ಆಗಿರುತ್ತದೆ. ಸದರಿ ಫೋಟೋದಲ್ಲಿ ಭಕ್ತಾದಿಗಳು ಬರುತ್ತಿರುವುದು ಕಾಣುತ್ತಿದೆ ಎಂದರೆ ಸರಿ. ನಿಪಿ-13ರಲ್ಲಿ ರೇಣುಕಯ್ಯ ಮತ್ತು ಅವರ ಧರ್ಮಪತ್ನಿಯ ಬಾವಚಿತ್ರ ಕಾಣುತ್ತಿದೆ ಎಂದರೆ ಸಾಕ್ಷಿ ಕಲ್ಯಾಣೋತ್ಸವ ಮಾಡಿದ ಸಂದರ್ಭದಲ್ಲಿ ಪೋಟೋ ತೆಗೆಯಲಾಗಿದೆ ಎಂದು ನುಡಿಯುತ್ತಾರೆ.

ನನ್ನ ತಂದೆ ಅರ್ಚಕ ವೃತ್ತಿ ಮಾಡುತ್ತಿರುವಾಗ ದೇವಸ್ಥಾನದಲ್ಲಿ ನಡೆದಿರುವ ಎಲ್ಲಾ ಚಟುವಟಿಕೆಗಳ ಬಗ್ಗೆ ನಾನು ಚೆನ್ನಾಗಿ ತಿಳಿದುಕೊಂಡಿರುತ್ತೇನೆ. ಸದರಿ ದೇವಸ್ಥಾನದಲ್ಲಿ ಯಾವ ಜಾತಿಯವರು ಬೇಕಾದರೂ ಪೂಜೆಗೆ ಬರಬಹುದು ಇಂತಹ ಜಾತಿಯರರಿಗೆ ಮಾತ್ರ ಪ್ರವೇಶ

ಎಂದು ಯಾವತ್ತಿಗೂ ಇಲ್ಲ. ಧನುರ್ಮಾಸದಲ್ಲಿ ನಮ್ಮ ತಂದೆಯ ಕಾಲದಿಂದ ಪೂಜೆ ನಡೆದುಕೊಂಡು ಬರುತ್ತಿದೆ ಎಂದರೆ ಸರಿ. ಧನುರ್ಮಾಸದಲ್ಲಿ ಬೆಳಗಿನ ಜಾವ 5-00 ಗಂಟೆ ಸಂದರ್ಭದಲ್ಲಿ ದೀಪ ಹಿಡಿದುಕೊಂಡು ಭಜನೆ ಮಾಡಿಕೊಂಡು ಊರು ಸುತ್ತುವ ಪದ್ಧತಿ ಇದ್ದು ಭಕ್ತಾದಿಗಳು ಕಾಣಿಕೆಯನ್ನು ದೀಪದಲ್ಲಿ ಹಾಕುತ್ತಿದ್ದರು ಎಂದರೆ ಸರಿ. ಈಗ ಊರಲ್ಲಿ ಭಜನೆ ಮಾಡಿಕೊಂಡು ಹೋಗುವ ಪದ್ದತಿ ಇಲ್ಲ ಆದರೆ ದೇವಸ್ಥಾನದಲ್ಲಿ ಬೆಳಗಿನ ಜಾವ ಮಾಡಲಾಗುತ್ತದೆ. ಪ್ರತಿ ಧನುರ್ಮಾಸದಂದು ಪ್ರತಿದಿನ ಗ್ರಾಮದ ಭಕ್ತಾದಿಗಳು ಒಬ್ಬರು ಒಂದೊಂದು ದಿನ ಸೇವಾಕಾರ್ಯ ಮಾಡಿಸುತ್ತಾರೆ ಎಂದರೆ ಸರಿ. ಸೇವೆ ಮಾಡುವ ಹೆಸರನ್ನು ಬೋರ್ಡ್ ನಲ್ಲಿ ಬರೆದು ಅವರಿಗೆ ದಿನಾಂಕ ನಿಗಧಿ ಮಾಡಲಾಗುತ್ತಿತ್ತು ಎಂದರೆ ಸರಿ. ಆ ದಿನ ಸೇವಾ ಖರ್ಚನ್ನು ಸೇವಾಕಾರರು ಹಣ ಕೊಡುತ್ತಿದ್ದರು ಎಂದರೆ ಸರಿ.

ಸಾಕ್ಷಿಗೆ ಕಮಿಟಿ ಸೇವಾ ಪುಸ್ತಕವನ್ನು ತೋರಿಸಿ ಇದರಲ್ಲಿ ಇರುವ ಹಸ್ತಾಕ್ಷರ ಯಾರದ್ದು ಎಂದರೆ ಸಾಕ್ಷಿ ಶ್ಯಾನುಬೋಗ ರಾಮಮೂರ್ತಿರವರ ಹಸ್ತಾಕ್ಷರ ಎಂದು ನುಡಿಯುತ್ತಾರೆ. ಸದರಿ ಪುಸಕ್ತದಲ್ಲಿ ಬೆಂಗಳೂರಿನ ಉಪವಿಭಾಗಾಧಿಕಾರಿಗಳು ದಿನಾಂಕ 18.05.1989ರಲ್ಲಿ ಆದೇಶ ಮಾಡಿದ್ದು ಅದಕ್ಕೆ ಒಪ್ಪಿಗೆ ಸೂಚಿಸಿ ಕೆಳಗಿನಂತೆ ಧರ್ಮದರ್ಶಿಗಳನ್ನು ಪುಸ್ತಕದಲ್ಲಿ ನಮೂದು ಮಾಡಿದ್ದು ಅವರುಗಳ ಹೆಸರುಗಳನ್ನು ಓದಿ ಹೇಳಿದಾಗ ಸಾಕ್ಷಿ ಹೌದು ಅದು ಸರಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿ ಹೆಸರನ್ನು 7ನೇ ಹೆಸರಾಗಿ ಪ್ರಧಾನ ಅರ್ಚಕರೆಂದು ನೇಮಕಮಾಡಿದ್ದು ಅದರಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಅಂತಹ ಕಮಿಟಿ ಪಸ್ತುಕವನ್ನು ನಿಡಿ-1 ಎಂದು, ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಬಾಲಪ್ಪ. ಬಿ.ಎಸ್ ರಾಮಮೂರ್ತಿ, ಬಿ.ವಿ ರಾಜಶೇಖರಯ್ಯ, ಬಿ.ಎನ್ ರಾಮಮೂರ್ತಿ,

ಸತ್ಯನಾಯರಾಣ ಗುಪ್ತ, ನೀವು ಅಂದರೆ ಶ್ರೀನಿವಾಸಚಾರ್, ಬಸವರಾಜು, ಮುತ್ತಯ್ಯ ಮತ್ತು ಮರಿಯಪ್ಪ ಇವರುಗಳೆಲ್ಲಾ ಸಮಿತಿ ರಚನೆ ಮಾಡಿಕೊಂಡು ಜಿಲ್ಲಾಧಿಕಾರಿಗಳ ಮುಂದೆ ಕೊಟ್ಟಿರುತ್ತೇವೆ ಎಂದರೆ ಸರಿ. ಅದರ ಬಗ್ಗೆ ನಿಡಿ-1ರಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ. ಸಮಿತಿಯಲ್ಲಿ ನಡೆಯುತ್ತಿದ್ದನ್ನು ಎಲ್ಲಾ ಬರವಣಿಗೆ ಮಾಡಿ ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನಾನು ಬರವಣಿಗೆ ಮಾಡಿರುವುದಿಲ್ಲ ಸಹಿ ಮಾತ್ರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಂತಹ ಸಹಿಯನ್ನು ನಿಡಿ-1(ಬಿ) ಎಂದು ಗುರುತಿಸಲಾಯಿತು. ಸಹಿ ಮಾಡುವ ಮುಂಚೆ ನಾನು ಓದುತ್ತಿರಲ್ಲಿ ಅವರು ಸಹಿ ಮಾಡು ಎಂದಾಗ ಸಹಿ ಮಾಡುತ್ತಿದ್ದೆ.

ದಿನಾಂಕ 30.05.1989ರಂದು ದೇವರ ಹೆಸರಿನಲ್ಲಿ ಇರುವ ಜಮೀನನನ್ನು ಬಿ.ಆರ್ ಗುರುಲಿಂಗಪ್ಪನವರ ಹೆಸರಿನಲ್ಲಿ ಜಮೀನನ್ನು ದೇವಸ್ಥಾನಕ್ಕೆ ಬಿಟ್ಟುಕೊಡತಕ್ಕದ್ದು ಎಂದು ತೀರ್ಮಾನ ಮಾಡಿ ಬರೆಯಲಾಗಿದೆ ಎಂದರೆ ಸರಿ. ಬಿ.ಆರ್ ಗುರುಲಿಂಗಪ್ಪಸನವರಿಗೆ ಇ ಷಡ್ಯೂಲ್ ಸ್ವತ್ತು ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಈ ಸ್ವತ್ತು ಗುರುಲಿಂಗಪ್ಪನವರಿಗೆ ಯಾವಾ ಕಾರಣಕ್ಕೆ ಆಗಿದೆ ಎಂದು ನನಗೆ ಗೊತ್ತಿಲ್ಲ.

ಅತೀ ಹೆಚ್ಚು ಬೆಲೆ ಬಾಳುವ ವಸ್ತುಗಳನ್ನು ಯಾರು ದೇವಸ್ಥಾನಕ್ಕೆ ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಂಚನಾಯಕನಹಳ್ಳಿಯ ನಾರಾಯಣಸ್ವಾಮಿ ನೀಡುತ್ತಿದ್ದರು ಅವರು ತೀರಿಕೊಂಡ ನಂತರ ಅವರ ಮಗ ಜಗದೀಶ್ ದಾನ ಮಾಡಿರುತ್ತಾರೆ. ಅವರು ಮೂಲ ವಿಗ್ರಹಗಳಿಗೆ ಬೆಳ್ಳಿ ಕವಚವನ್ನು ಮಾಡಿಸಿರುತ್ತಾರೆ.

ಸಂಕಷ್ಟಹಾರ ದಿನಗಳಲ್ಲಿ ನಾನು ವಿಶೇಷವಾಗಿ ಪೂಜೆ ಮಾಡುತ್ತಿದ್ದೆ ಎಂದರೆ ಸರಿ. ಆ ದಿನದಂದು ಸಂಜೆ ಪೂಜೆ ಮಾಡಲಾಗುತ್ತಿತ್ತು ಎಂದರೆ ಸರಿ. ಆ ದಿನಗಳಲ್ಲಿ ಅಂದಾಜು ಸುಮಾರು 25-30 ಜನ ಸೇರುತ್ತಿದ್ದರು. ದಿನನಿತ್ಯ ಸಂಜೆ 5 ರಿಂದ 9 ಸಂಜೆ 6 ರಿಂದ 8ಗಂಟೆವರೆಗೂ ಪೂಜೆ ಸಲ್ಲಿಸುತ್ತಿದ್ದೆವು. ಬಿಡದಿಯ ಸಾರ್ವಜನಿಕರು ಪೂಜೆಯಲ್ಲಿ ಭಾಗಿಯಾಗುತ್ತಿದ್ದರು ಎಂದರೆ ಸರಿ. ಭಕ್ತರು ಸಣ್ಣ ಪುಟ್ಟ ಕಾಣಿಕೆಯನ್ನು ಸಲ್ಲಿಸುತ್ತಿದ್ದರು ಎಂದರೆ ಸರಿ. ಬೆಳ್ಳಿ ಕವಚವನ್ನು ಹೊರತುಪಡಿಸಿ ಇನ್ನು ಕೆಲವರು ಬೆಲೆ ಬಾಳುವ ವಸ್ತುಗಳನ್ನು ದಾನ ಮಾಡಿರುತ್ತಾರೆ ಎಂದರೆ ಸರಿ.

ಮುಕ್ಕಾಲು ಕೆಜಿ ಬೆಳ್ಳಿ ಗಂಟೆಯನ್ನು ನನ್ನ ತಾಯಿಯವರ ಇಚ್ಛೆಯಂತೆ ಬಿ.ವಿ.ಕೆ ವಕೀಲರಾದ ನಾನು ದೇವಾಲಯಕ್ಕೆ ದಾನ ಕೊಟ್ಟಿರುತ್ತೇನೆ ಎಂದು ಕೇಳಿದಾಗ ಸಾಕ್ಷಿ ಹೌದು ನೀವು ಕೊಟ್ಟಿರುತ್ತೀರಾ ಎಂದು ನುಡಿಯುತ್ತಾರೆ. ಎಷ್ಟು ಬಾರಿ ದೇವಾಲಯದ ಜೀರ್ಣೋದ್ಧಾರ ಮಾಡಲಾಗಿದೆ ಎಂದರೆ ಸಾಕ್ಷಿ ಮಾಡಿಲ್ಲ ಎಂದು ನುಡಿಯುತ್ತಾರೆ. ಮೂಲವಾಗಿ ದೇವಾಲಯದ ಒಳಾಂಗಣದಲ್ಲಿ ಚಪ್ಪಡಿ ಕಲ್ಲು ಹಾಕಲಾಗಿತ್ತು ಎಂದರೆ ಸರಿ. ಈಗ ಚಪ್ಪಡಿ ಕಲ್ಲು ತೆಗೆದು ಗ್ರಾನೈಟ್ ಹಾಕಲಾಗಿದೆ ಎಂದರೆ ಸರಿ. ಮಾಳಿಗೆ ಸೋರುತ್ತಿತ್ತು ಅದನ್ನು ಇನ್ನು ರಿಪೇರಿ ಮಾಡಿಲ್ಲ ಈಗಲೂ ಸೋರುತ್ತಿದೆ. ಗ್ರಾನೈಟ್ ಹಾಕಿದರವರು ಯಾರು ಎಂದು ನನಗೆ ನೆನಪಿಲ್ಲ. ನಿವೃತ್ತ ಡಿಸಿ ಲಿಂಗರಾಜು ಅರಸುರವರು ಗ್ರಾನೈಟ್ ಹಾಕಿಸಿಕೊಟ್ಟಿರುತ್ತಾರೆ ಎಂದರೆ ಸರಿ. ದೇವಸ್ಥಾನದ ಪ್ರಂಗಣದಲ್ಲಿ ಗಣೇಶನ ಚಿಕ್ಕ ಗುಡಿ ಇದ್ದು ಅದನ್ನು ದೊಡ್ಡದಾಗಿ ಮಾಡಲಾಗಿದೆ ಎಂದರೆ ಸರಿ. ಎಲ್ಲಾ ಸೇವಾಕರರು ಮಾಡಿಸಿದ್ದು ಆ ಸೇವಾಕಾರರ ಹೆಸರು ಬರೆಯಲಾಗಿದೆ ಎಂದರೆ ಸರಿ. ವಾಸ್ತು ಸರಿ ಹೋಗುವುದಿಲ್ಲ ಎಂದು ಪ್ರತಿವಾದಿಗಳು ಗರುಡ ದೇವಸ್ಥಾನವನ್ನು ದೊಡ್ಡದಾಗಿ ಕಟ್ಟಿಸಿರುತ್ತಾರೆ.

ವೈಕುಂಠ ಏಕಾದಶಿಯನ್ನು ಸುವಾರು 10 ವರ್ಷಗಳಿಂದ ವಿಜೃಂಭಣೆಯಿಂದ ಆಚರಿಸಲು ಪ್ರಾರಂಭಿಸಿರಬಹುದು. ವೈಕುಂಠ ಏಕಾದಶಿಯನ್ನು ಮಾಜಿ ಎಂ.ಎಲ್.ಎ. ಆದ ಎ ಮಂಜು ರವರು ಪ್ರಾರಂಭಸಿರುತ್ತಾರೆ ಎಂದರೆ ಸರಿ. ನಂತರದಲ್ಲಿ ಬಿಡದಿಯ ಬಟ್ಟೆ ವರ್ತಕರು ಮತ್ತು ಕೆಲವು ದಿನಸಿ ವ್ಯಾಪಾರಸ್ಥರು ವೈಕುಂಠ ಏಕಾದಶಿಯನ್ನು ವಿಜೃಂಭಣೆಯಿಂದ ಮಾಡಿಸುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ವಾದಿ ಮತ್ತು ವರ್ತಕರೂ ಇಬ್ಬರೂ ಸೇರಿ ಮಾಡಿಸುತ್ತಿದ್ದಾರೆ ಎಂದು ನುಡಿಯುತ್ತಾರೆ.

ಸೇವಾ ಸಮಿತಿಯ ಸಂಪೂರ್ಣ ಜವಾಬ್ದಾರಿಯನ್ನು ಬಾಲಪ್ಪ ಮತ್ತು ರಾಮಮೂರ್ತಿರವರು ನೋಡುತ್ತಿದ್ದರು ಎಂದರೆ ಸರಿ. ಸೇವಾ ಸಮಿತಿಯಲ್ಲಿ ವಾದಿ ಮತ್ತು ವಾದಿ ವಂಶಸ್ಥರ ಹೆಸರು ಯಾರು ಇಲ್ಲ ಎಂದರೆ ಸತ್ಯನಾರಾಯಾಣ ಗುಪ್ತರವರು ದೇವಸ್ಥಾನಕ್ಕೆ ಆಗಾಗ್ಗ ಬಂದು ನಡೆಸಿಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಸತ್ಯನಾರಾಯಾಣ ಗುಪ್ತ ಮತ್ತು ಅವರ ವಾಸುದಾರರು ಈ ದಾವೆಯಲ್ಲಿ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಕೆಂಚನಕುಪ್ಪೆ ಗ್ರಾಮದ ಸರ್ವೇ ನಂಬರ್ 58 ದಾವಾ ಇ ಷಡ್ಯೂಲ್ ಸ್ವತ್ತಿಗೆ ಗುರುಲಿಂಗಪ್ಪನವರನ್ನು ಸರ್ಕಾರ ಗೇಣಿದಾರರಾಗಿ ನೋಂದಣಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗುರುಲಿಂಗಪ್ಪನವರು ಆತ ಗೇಣಿದಾರನಾಗಿ ಅರ್ಜಿ ಸಲ್ಲಿಸಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿದು ನಂತರದಲ್ಲಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಗುರುಲಿಂಗಪ್ಪನವರ ಮಕ್ಕಳು ದೇವಸ್ಥಾನ ಮತ್ತು ಪ್ರತಿವಾದಿಗಳನ್ನು

ಪಕ್ಷಗಾರರನ್ನಾಗಿ ಮಾಡಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಊರಿನನವರು ಎಲ್ಲರೂ ಸೇರಿ ಅದನ್ನು ಬಿಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ಸಂದರ್ಭದಲ್ಲಿ ವೆಂಕಟರಮಣ ಶೆಟ್ಟಿ ಅಥವಾ ಅವರ ಕುಟುಂಬ ವರ್ಗಾದವರಾಗಲೀ ಯಾರೂ ಭಾಗವಹಿಸಿರಲಿಲ್ಲ ಎಂದರೆ ಸಾಕ್ಷಿ ಸತ್ಯನಾರಾಯಣ ಗುಪ್ತ ಇದ್ದರು ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ಸತ್ಯನಾರಾಯಣ ಗುಪ್ತ ರವರನ್ನು ಪಕ್ಷಗಾರನ್ನಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿ ನಮ್ಮನ್ನು ಸಹ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದು ನುಡಿಯುತ್ತಾರೆ. 1 ರಿಂದ 10ನೇ ಪ್ರತಿವಾದಿಗಳು ಆ ದಾವೆ ನಡೆಯುವ ಸಂದರ್ಭದಲ್ಲಿ ಪೂರ್ವದಲ್ಲಿ ಇದ್ದ ಧರ್ಮದರ್ಶಿ ಮರಣ ಹೊಂದಿದ್ದರಿಂದ 1ನೇ ಪ್ರತಿವಾದಿ ಟ್ರಸ್ಟನಲ್ಲಿ ನೋಂದಣಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಯು ನನ್ನನ್ನೂ ಕೂಡ ಕರೆದುಕೊಂಡು ಬಂದಿದ್ದರು ನನ್ನನ್ನು ಸೇರಿಸಿಕೊಳ್ಳಲಿಲ್ಲ ನಾನು ಮನನೊಂದು ಹೋಗಲಿಲ್ಲ ಮುಖ್ಯವಾಗಿ ಅರ್ಚಕರನ್ನು ಟ್ರಸ್ಟ್ ನಲ್ಲಿ ಸೇರಿಸಬೇಕಾಗಿತ್ತು ಎಂದು ನುಡಿಯುತ್ತಾರೆ.

ಬಾಲಪ್ಪ ಮತ್ತು ಬಿ.ಎನ್ ರಾಮಮೂರ್ತಿ ರವರು ಮರಣ ಹೊಂದಿದ ನಂತರ ಅವರ ವಾರುದಾರರನ್ನು ಅವರ ಜಾಗಕ್ಕೆ ಸೇರಿಸಲಾಗಿದೆ ಎಂದರೆ ಸರಿ. ಜಿಲ್ಲಾಧಿಕಾರಿ ಮತ್ತು ಉಪ ವಿಭಾಗಾಧಿಕಾರಿಗಳ ಆದೇಶದಿಂದ ಸಮಿತಿ ರಚನೆಯಾದ ನಂತರ ದಾವೆ ಹಾಕುವವರೆಗೂ ನಿಮಗೆ ಸಂಬಳವನ್ನು ಸಂದಾಯ ಮಾಡುತ್ತಿದ್ದರು ಯಾರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವಾದಿಯ ಕುಟುಂಬ ಶ್ರೀನಿವಾಸಶೆಟ್ಟಿ ರವರು ಕೊಡುತ್ತಿದ್ದರು. ಅವರು ಹಣ ಸಂದಾಯ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ನನ್ನ ಬಳಿ ಇಲ್ಲ. ಸಮಿತಿಯಿಂದ ನೀಡುತ್ತಿದ್ದ ಸಂಬಳ ಕಡಿಮೆಯಾಗಿದೆ ಎಂದು ನಾನು ಬಿಡದಿ ಅಂಚೆ ಕಛೇರಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೇನೆ ಎಂದರೆ ಸರಿ. ನನಗೆ ಕೇಂದ್ರ ಸರ್ಕಾರದ ನಿಯಾನುಸಾರ

ಶಾಶ್ವತ ಜಿಡಿಎಸ್ ನೌಕರ ಎಂದು ನೇಮಕ ಮಾಡಿಕೊಳ್ಳಲಾಗಿದೆ ಎಂದರೆ ಸರಿ. ಅಂಚೆ ಕಛೇರಿಯಲ್ಲಿ ಬೆಳಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆ ವರೆಗೆ ಪ್ರತಿ ದಿನ ಕೆಲಸ ನಿರ್ವಹಿಸುತ್ತಿದ್ದೆನು.

ಬಿಡದಿ ಗ್ರಾಮದ ಸರ್ವೇ ನಂಬರ್ 49/5ರ ಜಮೀನು ಯಾರರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಜಮೀನು ಯಾವುದು ಇಲ್ಲ ಎಂದು ನುಡಿಯುತ್ತಾರೆ. ದೇವಸ್ಥಾನವನ್ನು ಯಾರು ಕಟ್ಟಿಸಿರುತ್ತಾರೆ ಎಂದು ನಾನು ವೈಯಕ್ತಿವಾಗಿ ನೋಡಿಲ್ಲ ವೆಂಕಟರಾಮಶೆಟ್ಟಿರವರು ಕಟ್ಟಿಸಿರುತ್ತಾರೆ ಎಂದು ಬೋರ್ಡ್ ಬರೆಯಾಲಾಗಿದೆ ಎಂದು ವೆಂಕಟರಮ ಶೆಟ್ಟಿಯರ ಫೋಟೋವನ್ನು ಇದ್ದು ಅದನ್ನು ನಮ್ಮ ತಂದೆ ತೋರಿಸಿ ನನಗೆ ಹೇಳಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಈಗಲೂ ಸಹ ವೆಂಕಟರಮಣಶೆಟ್ಟಿರವರು ನಿರ್ಮಿಸಿರುತ್ತಾರೆ ಎಂದು ಬೊರ್ಡ್ ಇದೆ ಎಂದರೆ ಸರಿ.

ಸಾಕ್ಷಿಗೆ ಬೋರ್ಡಿನಲ್ಲಿ " ಶ್ರೀರಾಮಲ ದೇವಾಲಯಮು ಬಿಡದಿ ತಾಳಂಕಿ ವೆಂಕಟರಾಮಯ್ಯ ಶೆಟ್ಟಿ ವಾದಿ ಕೈಂಕರ್ಯಮು ಸ್ಥಾಪಿತಮು ತಾಃ 23.05.1935" ಎಂದು ಬರೆಯಲಾಗಿದೆ ಎಂದರೆ ಸರಿ. ದೇವಸ್ಥಾನ ಸುತ್ತಮುತ್ತ ಮತ್ತು ಬೋರ್ಡಿನಲ್ಲಿ ಸ್ವಂತ ಹಣದಿಂದ ತಾಳಂಕಿ ವೆಂಕಟರಾಮಯ್ಯ ಶೆಟ್ಟಿರವರು ಕಟ್ಟಿಸಿರುತ್ತಾರೆ ಎಂದು ಎಲ್ಲಾದರೂ ಬರೆಯಲಾಗಿದೆಯಾ ಎಂದರೆ ಸಾಕ್ಷಿ ಹಾಗೆ ಬರೆದಿರುವುದು ನನಗೆ ನೆನಪಿಲ್ಲ ಹಾಗೆ ಯಾರು ಬರೆಯುವುದಿಲ್ಲ ಮತ್ತು ಬರೆದಿಲ್ಲ ಎಂದು ನುಡಿಯುತ್ತಾರೆ.

ನಾನು ಪೌರೊಹಿತ್ಯ ನಡೆಸುತ್ತಿರುವುದು ವೆಂಕಟರಾಮಯ್ಯ ಶೆಟ್ಟಿರವರಿಗೆ ಮಾತ್ರ ಅಲ್ಲ ಸಾರ್ವಜನಿಕರು ಎಲ್ಲರೂ ಸಹ ಸೇರಿ ಪೂಜೆ ನಡೆಸುತ್ತಿದ್ದೆ.

ನಮ್ಮ ತಂದೆಯವರು ಸಹ ಅದೇ ರೀತಿ ಪೂಜೆ ಮಾಡುತ್ತಿದ್ದರು. ವಾದಿ ಬಂದಾಗ ಮಾತ್ರ ಪೂಜೆ ಮಾಡಿ ಬೀಗ ಕೊಡುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಲ್ಲರೂ ಬಂದಾಗ ಪೂಜೆ ಮಾಡಿ ಬೀಗ ನನ್ನ ಬಳಿ ಇಟ್ಟುಕೊಳ್ಳುತ್ತಿದ್ದೆ. ವೆಂಕಟರಾಮಯ್ಯ ಶೆಟ್ಟಿ ತಮ್ಮ ಕುಟುಂಬದಕ್ಕೆ ಮಾತ್ರ ಪೂಜೆ ಮಾಡಬೇಕು ಮತ್ತು ಅರ್ಚಕರು ಅವರು ಬಂದಾಗ ಮಾತ್ರ ಪೂಜೆ ಮಾಡಬೇಕು ಎಂದು ಯಾವುದೇ ನಿಯಮ ಇರಲಿಲ್ಲ. ದೇವಸ್ಥಾನ ಸ್ಥಾಪನೆಯಾದಾಗಿನಿಂದ ಅದು ಸಾರ್ವಜನಿಕರಿಗೆ ಸಿಮಿತ ಎಂದರೆ ಸರಿ. ದೇವಸ್ಥಾನ ಪಶ್ಚಿಮ ಭಾಗದಲ್ಲಿ ನಮಗೆ ಮನೆ ಮತ್ತು ದಕ್ಷಿಣ ಭಾಗದಲ್ಲಿ ಬಾವಿ ಇದೆ ಎಂದರೆ ಸರಿ. ಮನೆಯಲ್ಲಿ ನಾನು, ನನ್ನ ತಂದೆ ಮತ್ತು ಕುಟುಂಬದವರು ವಾಸ ಮಾಡಿಕೊಂಡಿದ್ದೆವು ಎಂದರೆ ಸರಿ. ನಾವು ವಾಸ ಇದ್ದ ಮನೆ ಗಾರೆ ಮನೆ ಇದ್ದು ಅದನ್ನು ಕೆಡವಿ ಹೊಸ ಮನೆ ಕಟ್ಟಿರುತ್ತೇವೆ. ಹೊಸ ಮನೆಯನ್ನು ಪ್ರತಿವಾದಿ ಟ್ರಸ್ಟ್ ನವರು ಕಟ್ಟಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹೇಳಿದ ಹಾಗೆ ಕಟ್ಟಿಕೊಡಲಿಲ್ಲ ಎಂದು ನನಗೆ ಮನಸ್ತಾಪ ಇದೆ. ಬಾವಿ ಇದೆ ಅದನ್ನು ಮುಚ್ಚಲಾಗಿದೆ. ಬಾವಿ ಮುಚ್ಚಬಾರದು ಎಂದು ಹೇಳಿದ್ದರೂ ಮುಚ್ಚಿ ಇರುತ್ತಾರೆ. ಅಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡಿಲ್ಲ. ಈ ಕೆಲಸವನ್ನು ಪ್ರತಿವಾದಿ ಟ್ರಸ್ಟ್ ನವರು ಮಾಡಿರುತ್ತಾರೆ. ಬಾವಿ ಇದ್ದಾಗ ಸಾರ್ವಜನಿಕರು ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ.

ಮೊದಲಿಗೆ ದೇವಸ್ಥಾನ ದಕ್ಷಿಣ ದಿಕ್ಕಿಗೆ ಯಾವುದೇ ಮಳಿಗೆ ಇರಲಿಲ್ಲ ಎಂದರೆ ಸರಿ. ನರಸಿಂಹಮೂರ್ತಿರವರು ದೇವಸ್ಥಾನ ದಕ್ಷಿಣ ದಿಕ್ಕಿನ ಹೊರ ಭಾಗದಲ್ಲಿ ಒಂದು ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದರು ಎಂದರೆ ನನಗೆ ನೆನಪಿಲ್ಲ. ದೇವಸ್ಥಾನ ಪೂರ್ವದ ಶಾಲೆ ರಸ್ತೆಯಿಂದ ದಕ್ಷಿಣ ದ್ವಾರದವರೆಗೆ ಅಂಗಡಿ ಮಳಿಗೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಅಂಗಡಿ

ಮಳಿಗೆಗಳನ್ನು ಪ್ರತಿವಾದಿ ಟ್ರಸ್ಟ್ ಕಟ್ಟಿಸಿರುತ್ತಾರೆ ಎಂದರೆ ಸರಿ. ಅದನ್ನು ಯಾವಾಗ ಕಟ್ಟಲಾಗಿದೆ ಎಂದು ನನಗೆ ನೆನಪಿಲ್ಲ. 1991-92ನೇ ಸಾಲಿನಲ್ಲಿ ಮಳಿಗೆಗಳನ್ನು ಗ್ರೌಂಡ್ ಫ್ಲೋರ್ ಕಟ್ಟಲಾಗಿದೆ ಎಂದರೆ ನನಗೆ ನೆನಪಿಲ್ಲ. ಅಂಗಡಿ ಮಳಿಗೆಗಳನ್ನು ಕಟ್ಟುವಾಗ ವಾದಿ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ವಾದಿ ಪ್ರಶ್ನೆ ಮಾಡಿದ್ದಾರೆ ಆದರೆ ನಾನು ಯಾವ ವಿಚಾರಕ್ಕೂ ಹೋಗಲಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 10.06.1976ರಂದು ನಮ್ಮ ತಂದೆ ತೀರಿಕೊಂಡರು ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ವಾದಿ ಮತ್ತು ಅವರ ಕುಟುಂಬದ ಮಾಡಿಕೊಂಡ ಟ್ರಸ್ಟ್ ಪ್ರತಿಯನ್ನು ನಾನು ನೋಡಿಲ್ಲ. ವಾದಿ ಮಾಡಿಕೊಂಡ ಟ್ರಸ್ಟ್ ನ ಪತ್ರಗಳನ್ನು ನಾನು ನೋಡಿಲ್ಲ. ವೆಂಕಟೇಶ್ ರವರನ್ನು ಟ್ರಸ್ಟಿಯನ್ನಾಗಿ ಮಾಡಿರುವ ಬಗ್ಗೆ ನನಗೆ ಹೇಳಿದ್ದರು, ಹಾಗೆ ಮಾಡಿರುವ ಬಗ್ಗೆ ನನಗೆ ಖುದ್ದಾಗಿ ಗೊತ್ತಿಲ್ಲ. ದಿನಾಂಕ 20.05.1970ರಲ್ಲಿ ಟ್ರಸ್ಟ್ ರಿವೋಕ್ ಆಗಿದೆ ಎಂದು ವಾದಿ ದಾಖಲೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 10.06.1976ರಂದು ನಮ್ಮ ತಂದೆ ತೀರಿಕೊಂಡ ನಂತರ ವಾದಿ ಕುಟುಂಬದಲ್ಲಿ ಯಾವುದೇ ಟ್ರಸ್ಟ್ ವನ್ನು ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಬಾನಂದೂರು ಗ್ರಾಮದಲ್ಲಿ 11 ಎಕರೆ ಜಮೀನಿನ್ನು ಟ್ರಸ್ಟ್ ಗೆ ಮಾಡಲಾಗಿತ್ತು ಅದನ್ನು ಮಕ್ಕಳು ಮಾರಾಟ ಮಾಡಿಕೊಂಡಿದ್ದಾರೆ ಎಂದು ಟ್ರಸ್ಟ್ ರಿವೋಕ್ ಮಾಡಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಟ್ರಸ್ಟ್ ಆದಾಗಿನಿಂದಲೂ ನನಗೆ ಸಂಬಳ ಕೊಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಸಂಬಳ ಕೊಡುತ್ತಿಲ್ಲ ಎಂದು ನುಡಿಯುತ್ತಾರೆ. 2008ರಲ್ಲಿ ಪ್ರತಿವಾದಿಗಳು ಟ್ರಸ್ಟ್ ಮಾಡಿಕೊಂಡಾಗ ನನ್ನ

ಹಿರಿಯ ಮಗ ಖುದ್ದಾಗಿ ಹೋಗಿ ಟ್ರಸ್ಟ್ ಗೆ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಟ್ರಸ್ಟ್ ಆದಾಗಿನಿಂದ ಅವರೆ ಎಲ್ಲಾ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಅವರ ಸಹವಾಸಕ್ಕೆ ಹೋಗುವುದಿಲ್ಲ ನನ್ನ ಮನಸ್ಸಿಗೆ ನೋವಾಗಿದೆ ಎಂದು ನುಡಿಯುತ್ತಾರೆ.

ರಮೇಶ್ ರವರು ದೇವಾಲಯಕ್ಕೆ ಪ್ರತಿದಿನ ಎಲ್ಲಾ ಪೂಜಾ ಸಾಮಗ್ರಿಗಳನ್ನು ಕೊಡುತ್ತಿದ್ದರು ಎಂದರೆ ಸಾಕ್ಷಿ ಯಾರು ಕೊಡುತ್ತಾರೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬೆಳಗ್ಗೆ ಮತ್ತು ಸಂಜೆ ಮಾಡುವ ಪೂಜಾ ಖರ್ಚನ್ನು ನಾನೇ ಖುದ್ದು ನೋಡಿಕೊಳ್ಳುತ್ತೇನೆ. ದೇವಸ್ಥಾನದ ಪಕ್ಕದಲ್ಲಿ ಕಟ್ಟಿರುವ ಮಳಿಗೆಯ ಬಾಡಿಗೆ ಹಣದಿಂದ ಪೂಜಾ ಖರ್ಚನ್ನು ಪ್ರತಿವಾದಿಗಳೇ ಕೊಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ನನಗೆ ಬೇಜಾರಾಗಿದೆ ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.